ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

# ಸಿ. ಸಿ. ಸಂಖ್ಯೆ: 3161/24

ಡಿಡಬ್ಲ್ಯು: - 1

ದಿನಾಂಕಃ 19.02.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಫಿರ್ಯಾದಿ ಪರ ವಕೀಲರಾದ ಶ್ರೀ. ಬಿ ಎಸ್ ಆರ್ ರವರಿಂದಃ-

ಫಿರ್ಯಾದಿಯವರು ಮಡಿಕೇರಿಯಲ್ಲಿ ಕೋಳಿ ಮಾಂಸದ ಹೋಲ್ ಸೇಲ್ ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ಕೋಳಿ ಮಾಂಸದ ಬಾಪ್ತು ರಿಟೇಲ್ ವ್ಯಾಪಾರ ಮಾಡುತಿತದ್ದೇನೆ ಎಂದರೆ ಸರಿ. ನನ್ನ ಚಿಕನ್ ಸ್ಟಾಲ್ ಮಡಿಕೇರಿಯ ಗಣಪತಿ ಬೀದಿಯಲ್ಲಿ ಇದೆ ಎಂದರೆ ಸರಿ ಮತ್ತು ಅದರ ಹೆಸರು ಆರ್ ಆರ್ ಮಟನ್ ಆ್ಯಂಡ್ ಚಿಕನ್ ಸ್ಟಾಲ್ ಎಂದರೆ ಸರಿ. ನಾನು ಮಡಿಕೇರಿಯ ರಾಣಿಪೇಟೆಯ ಜಿ ಎಸ್ ಕೆ ಅನುಭವ ಮಂಟಪದ ಎದುರಿನಲ್ಲಿರುವ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ಮೊಬೈಲ್ ಸಂಖ್ಯೆ 7975332998 ನನ್ನ ಮೊಬೈಲ್ ಸಂಖ್ಯೆ ಎಂದರೆ ಸರಿ. ನಿಪಿ-1 ಚೆಕ್ ನನ್ನ ಖಾತೆಗೆ ಸಂಬಂಧಪಟ್ಟಿದ್ದು ಎಂದರೆ ಸರಿ, ನಿಪಿ- 1 ಚೆಕ್ ನಲ್ಲಿರುವ ಸಹಿ ನನ್ನದೇ ಎಂದರೆ ಸರಿ. ನಿಪಿ-6 ಮತ್ತು 7 ರಲ್ಲಿರುವ ಸಹಿ ನನ್ನದು ಎಂದರೆ ಸರಿ. 2017 ರಿಂದ ಫಿರ್ಯಾದಿ ನನ್ನ ರಿಟೇಲ್ ಅಂಗಡಿಗೆ ಕೋಳಿ ಮಾಂಸವನ್ನು ಸರಬರಾಜು ಮಾಡುತ್ತಿದ್ದರು ಹಾಗೂ ಆಗಿನಿಂದ ನನ್ನ ಮತ್ತು ಅವರ ನಡುವೆ ವ್ಯವಹಾರ ಇದೆ ಎಂದರೆ ಸರಿ. ಈಗಲೂ ಕೂಡ ಫಿರ್ಯಾದಿ ನನ್ನ ರಿಟೇಲ್ ಕೋಳಿ ಮಾಂಸದ ಅಂಗಡಿಗೆ ಮಾಂಸ ಸರಬರಾಜು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಿಃ 18.02.2026 ರಂದು ಫಿರ್ಯಾದಿ ನನ್ನ ರಿಟೇಲ್ ಅಂಗಡಿಗೆ 309.5 ಕೆ ಜಿ ಕೋಳಿಯನ್ನು ಸರಬರಾಜು ಮಾಡಿದ್ದಾರೆ ಎಂದರೆ ಸರಿ. ನನಗೆ ಕೋಳಿ ಬೇಕು ಎಂದಾಗ ನಾನು ಫಿರ್ಯಾದಿಯವರಿಗೆ ಬೇಡಿಕೆ ಇಡುತ್ತೇನೆ, ಫಿರ್ಯಾದಿ ಅದನ್ನು ನನಗೆ ಸರಬರಾಜು ಮಾಡಿದ ಮಾರನೆ ದಿನ ನಾನು ಫಿರ್ಯಾದಿಗೆ ಹಣ ಪಾವತಿ ಮಾಡುತ್ತೇನೆ ಎಂದರೆ ಸರಿ. ಫಿರ್ಯಾದಿ ಕ್ರೆಡಿಟ್‌ನಲ್ಲಿ ಕೋಳಿಯನ್ನು ಸರಬರಾಜು ಮಾಡುತ್ತಾರೆ ಎಂದರೆ ಸರಿ. ಕೋಳಿ ಸರಬರಾಜು ಮಾಡಿದ ಬಾಪ್ತು ನಾನು ಹಣವನ್ನು ಫಿರ್ಯಾದಿಗೆ ಪಾವತಿ ಮಾಡಿದೆ ಮೇಲೆ ಫಿರ್ಯಾದಿ ರಶೀದಿಯನ್ನು ನನ್ನ ಮೇಲೆ ಹೇಳಿದ ಮೊಬೈಲ್ ಸಂಖ್ಯೆಯ ವಾಟ್ಸ್ ಆಪ್ ಗೆ ರಶೀದಿ ಕಳುಹಿಸುತ್ತಾರೆ ಎಂದರೆ ಸರಿ. ದಿಃ 06.06.2024 ರಂದು ಫಿರ್ಯಾದಿ ನನಗೆ 251.800 ಕೆ ಜಿ ಕೋಳಿಯನ್ನು ಸರಬರಾಜು ಮಾಡಿದ್ದಾರೆ ಎಂದರೆ

ಸರಿಯಲ್ಲ. ದಿಃ 07.06.2024ರಂದು ಕೋಳಿ ಸರಬರಾಜು ಬಾಪ್ತು ನಾನು ನನ್ನ ಫೋನ್ ಪೇ ಮುಖಾಂತರ ಫಿರ್ಯಾದಿ ಖಾತೆಗೆ ರೂ.19,000/- ಮತ್ತು ರೂ.17,000/- ಹಣವನ್ನು ಪಾವತಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಫಿರ್ಯಾದಿಯಿಂದ ಪಡೆದುಕೊಂಡಿದ್ದ ಸಾಲದ ಬಾಪ್ತು ಆ ಹಣವನ್ನು ಫೋನ್ ಪೇ ಮುಖಾಂತರ ಪಾವತಿ ಮಾಡಿದ್ದೇನೆ.

ದಿಃ 09.06.2024ರಂದು ಕೋಳಿ ಸರಬರಾಜು ಬಾಪ್ತು ನಾನು ನನ್ನ ಫೋನ್ ಪೇ ಮುಖಾಂತರ ಫಿರ್ಯಾದಿ ಖಾತೆಗೆ ರೂ.30,000/-, ದಿಃ11.06.2024 ರಂದು ರೂ.33,000/-, ದಿಃ13.06.2024 ರಂದು ರೂ.3,000/-, ದಿಃ19.06.2024 ರಂದು ರೂ.22,000/-, ದಿಃ22.06.204 ರಂದು ರೂ.12,000/-, ದಿಃ 15.06.2024 ರಂದು ರೂ.34,500/-, ದಿಃ16.06.2024 ರಂದು ರೂ.8,100/- ಮತ್ತು 12,200/- ಹಣವನ್ನು ಪಾವತಿ ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಫಿರ್ಯಾದಿಯಿಂದ ಪಡೆದುಕೊಂಡಿದ್ದ ಸಾಲದ ಬಾಪ್ತು ಆ ಹಣವನ್ನು ಫೋನ್ ಪೇ ಮುಖಾಂತರ ಪಾವತಿ ಮಾಡಿದ್ದೇನೆ.

ಈ ಪ್ರಕರಣವನ್ನು ಹೊರತು ಪಡಿಸಿ ನನ್ನ ವಿರುದ್ಧ ಈ ನ್ಯಾಯಾಲಯದಲ್ಲಿ ಇನ್ನಾವುದೇ ಚೆಕ್ ಬೌನ್ಸ್ ಪ್ರಕರಣ ಇಲ್ಲ. ನಿಮಗೆ ಸಿ. ವೈ ಅಸ್ಫತ್ ಎನ್ನುವ ವ್ಯಕ್ತಿ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಸಿ.ವೈ. ಅಸ್ಫತ್ ರವರು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಸಿ ಸಿ 1982/25 ರಂತೆ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 03.06.2024 ರಂದು ನಾನು ಫಿರ್ಯಾದಿಯಿಂದ ರೂ.2 ಲಕ್ಷ ಸಾಲ ಪಡೆದಿದ್ದೇನೆ ಎಂದರೆ ಸರಿ. ಸದರಿ ಸಾಲದ ಬಾಪ್ತು ನಾನು ಫಿರ್ಯಾದಿಗೆ ಆ ಸಾಲ ಮರುಪಾವತಿ ಮಾಡುವ ಸಲುವಾಗಿ ನಿಪಿ-1 ಚೆಕ್ಕನ್ನು ದಿಃ 21.06.2024 ಎಂದು ನಮೂದಿಸಿ ನೀಡಿದ್ದೇನೆ ಎಂದರೆ ಸರಿ. ನಿಪಿ-1 ಚೆಕ್ ಅಮಾನ್ಯಗೊಂಡ ಮೇಲೆ ಫಿರ್ಯಾದಿ ನನಗೆ ಡಿಮ್ಯಾಂಡ್ ನೋಟಿಸ್ ನೀಡಿದ್ದು ಅದನ್ನು ನಾನು ಪಡೆದುಕೊಂಡಿದ್ದೇನೆ ಎಂದರೆ ಸರಿ. ಫಿರ್ಯಾದಿ ಕಳುಹಿಸಿದ ನೋಟಿಸ್ ಗೆ ನಾನು ಯಾವುದೇ ಪ್ರತ್ಯುತ್ತರ ನೀಡಿಲ್ಲ ಎಂದರೆ ಸರಿ. ನೀವು ಫಿರ್ಯಾದಿಗೆ ಯಾವುದೇ ಹಣ ಮರುಪಾವತಿ ಮಾಡಲು ಬಾಕಿ ಇಲ್ಲದೆ ಇದ್ದ ಪಕ್ಷದಲ್ಲಿ ಅವರಿಗೆ ಪ್ರತ್ಯುತ್ತರದ ನೋಟಿಸ್ ನೀಡಲು ನಿಮಗೆ ಅಭ್ಯಂತರ ಇರಲಿಲ್ಲ ಎಂದರೆ ಸರಿ. ಆಗಲೆ ಮೇಲೆ ಸೂಚಿಸಿದ ದಿನಾಂಕಗಳಂದು ನಾನು ಪಿರ್ಯಾದಿಗೆ ಕಳುಹಿಸಿದ ಹಣ ನನ್ನ ಮತ್ತು ಫಿರ್ಯಾದಿ ನಡುವಿನ ಕೋಳಿ ಹಣದ ಬಾಪ್ತು ಪಾವತಿ ಮಾಡಿದ ಹಣವಾಗಿದೆಯೇ ಹೊರತು ನಾನು ಪಡೆದುಕೊಂಡ ರೂ.2 ಲಕ್ಷ ಹಣಕ್ಕೆ ಮರುಪಾವತಿ ಮಾಡಿರುವುದಲ್ಲ ಎಂದರೆ ಸರಿಯಲ್ಲ. ನಾನು ಫಿರ್ಯಾದಿಯಿಂದ ಪಡೆದುಕೊಂಡ ರೂ.2 ಲಕ್ಷದ ಸಾಲದ ಬಾಧ್ಯತೆಯಿಂದ ನುಣುಚಿಕೊಳ್ಳಲು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಹಣವನ್ನು ಫಿರ್ಯಾದಿಗೆ ಪಾವತಿ ಮಾಡಿದ್ದೇ ಆದರೆ ನಿಪಿ-1 ಚೆಕ್ಕನ್ನು ನಗಧೀಕರಣಕ್ಕೆ ಹಾಜರು ಪಡಿಸಿದಾಗ ಅದನ್ನು ಮಾನ್ಯ ಮಾಡಬಾರದು ಎಂದು ಹೇಳಿ ನಿಮ್ಮ ಬ್ಯಾಂಕಿಗೆ stop payment order ಕೊಡಲು ನಿಮಗೆ ತೊಂದೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಏನೂ ಇರಲಿಲ್ಲ ಎನ್ನುತ್ತಾರೆ . ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಮಡಿಕೇರಿ.